# ಮತ್ತೆ ಅಂಬೇಡ್ಕರ್ ಜಯಂತಿ

ಪ್ರತಿವರ್ಷ ಏಪ್ರಿಲ್ ಸಮೀಪಿಸುತ್ತಿದ್ದಂತೆಯೆ ದಲಿತ ಸಂಘಟನೆಗಳು, ಒಕ್ಕೂಟಗಳು, ದೊಡ್ಡ ದೊಡ್ಡ ಸಂಸ್ಥೆಗಳಲ್ಲಿನ ದಲಿತ ಸಾಂಸ್ಕೃತಿಕ ವೇದಿಕೆಗಳು ಬಾಬಾಸಾಹೇಬ ಡಾ.ಬಿ.ಆರ್.ಅಂಬೇಡ್ಕರ್‌ರವರ ಜಯಂತಿಯನ್ನು ಆಚರಿಸಲು ಸಜ್ಜಾಗತೊಡಗುತ್ತವೆ. ಸಾಮಾನ್ಯವಾಗಿ ಬಾಬಾಸಾಹೇಬರ ಜಯಂತ್ಯುತ್ಸವ ಎಲ್ಲ ಕಡೆಯೂ ಅತ್ಯಂತ ಶಿಸ್ತಿನಿಂದಲೇ ಅಚ್ಚುಕಟ್ಟಾಗಿ ನೆರವೇರುತ್ತದೆ. ಇತ್ತೀಚೆಗೆ ದಲಿತರ ಕಾರ್ಯಕ್ರಮಗಳಿಗೆ ಸವರ್ಣೀಯರ ಸಹಭಾಗಿತ್ವವೂ ದೊರಕುವುದರಿಂದ ಅದ್ದೂರಿತನವೂ ಇರುತ್ತದೆ ಮತ್ತು ಅಂಬೇಡ್ಕರ್ ಅವರ ಹೆಸರೇ ಸಮಾರಂಭಕ್ಕೆ ಒಂದು ಗಾಂಭೀರ್ಯವನ್ನು ತಂದುಕೊಡುತ್ತದೆ. ಅತಿಥಿಗಳೆಲ್ಲರೂ ಶೋಷಣೆಯ ವಿರುದ್ಧ, ಶೋಷಿತರ ಪರವಾಗಿಯೇ ಮಾತಾಡುವುದರಿಂದ ಗೊಂದಲವೇ ಇರುವುದಿಲ್ಲ. ಕಾರ್ಯಕ್ರಮ ಯಶಸ್ವಿಯಾಗಿಯೆ ನಡೆಯುತ್ತದೆ. ಪತ್ರಿಕೆಗಳು, ಇತರೆ ಸುದ್ದಿ ಮಾಧ್ಯಮಗಳು ಅವುಗಳನ್ನು ಬಿತ್ತರಿಸಿ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಮೆರೆಯುತ್ತವೆ. ಮರುವರ್ಷವೂ ಇದೇ ದೃಶ್ಯಾವಳಿ ಪುನರಾವರ್ತನೆಯಾಗುತ್ತದೆ.

ಇದು ಕಳೆದ ಸುಮಾರು 60 ವರ್ಷಗಳಿಂದ ಅನೂಚಾನವಾಗಿ ನಡೆದುಕೊಂಡು ಬರುತ್ತಿರುವ ಪದ್ಧತಿ. ಇದರ ಹೊರತಾಗಿ ಅಂಬೇಡ್ಕರ್ ದಲಿತರಿಗೆ, ಶೋಷಿತರಿಗೆ ಎಷ್ಟರಮಟ್ಟಿಗೆ ನಿಲುಕಿದ್ದಾರೆ ಎಂಬ ಪ್ರಶ್ನೆಗೆ ಸಕಾರಾತ್ಮಕ ಉತ್ತರ ಸಿಗಲಾರದು. ಒಂದು ವರ್ಗ ಅವರನ್ನು ಅಂತರಂಗದಲ್ಲಿ ಧ್ಯಾನಿಸುತ್ತಾ ಭಕ್ತಿಮಾರ್ಗ ಹಿಡಿದು ಪೂಜೆಗೈಯುತ್ತಿದೆ. ಇನ್ನೊಂದು ಓದುವ, ಅರಿತುಕೊಳ್ಳುವ, ವಿಮರ್ಶಿಸುವ ಕೆಲಸ ಮಾಡುತ್ತಿದೆ. ಆದ್ದರಿಂದ ಅಂಬೇಡ್ಕರ್ ಅನುಯಾಯಿಗಳಲ್ಲಿ ಎರಡು ಪಂಥಗಳಿರುವುದನ್ನು ಹೀಗೆ ಗುರುತಿಸಬಹುದು. 1) ಆರಾಧನೆಯ ಪಂಥ 2) ಅನುಸರಣೆಯ ಪಂಥ.

ಮೊದಲನೆಯ ಪಂಥದಿಂದ ಅಂಬೇಡ್ಕರ್‌ವಾದಕ್ಕೆ ಸೋಲುಂಟಾಗಿದೆ ಎಂಬುದು ನಿರ್ವಿವಾದದ. ಇವರಿಗೆ ಅಂಬೇಡ್ಕರ್ ಬಗೆಗಿನ ಅರಿವಿನ ಕೊರತೆ ಅಷ್ಟೆ ಅಲ್ಲ, ದಲಿತತ್ವದ ಬಗ್ಗೆ ಅಜ್ಞಾನವಿದೆ. ತಮ್ಮ ಪರಂಪರೆಯ ನೋವನ್ನೂ ಅವರು ಮರೆತಿದ್ದಾರೆ ಎನ್ನಬಹುದು. ಆದರೆ, ಅನುಸರಣೆಯ ಪಂಥ ಅಂಬೇಡ್ಕರ್‌ವಾದದ ಗೆಲುವಿಗೆ ಕಾರಣವಾಗಿದೆ. ಇವರಿಗೆ ಪೂರ್ವಪರಂಪರೆಯ ಅರಿವಿದೆ. ಶಿಕ್ಷಣದಿಂದ ಸಂವೇದನಾಶೀಲತೆಯನ್ನು ಬೆಳೆಸಿಕೊಂಡಿದ್ದಾರೆ. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ತಮ್ಮ ಸ್ಥಾನಮಾನವೇನು ಎಂಬುದನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಆತ್ಮಗೌರವ, ಸ್ವಾಭಿಮಾನಗಳಿಗಾಗಿ ಹಂಬಲಿಸುತ್ತಾರೆ. ಆರಾಧನೆಯ ಪಂಥಕ್ಕೆ ಅಂಬೇಡ್ಕರ್– ಗಾಂಧಿ ಸಂಘರ್ಷದ ಕಾರಣದಿಂದ ದೊರೆತ ಮೀಸಲಾತಿಯೇ ಮಹಾಪ್ರಸಾದ. ಅದರಿಂದಲೇ ಸಕಲ ಸಾಮಾಜಿಕ ರೋಗಗಳಾದ ಅಸಮಾನತೆ ಇತ್ಯಾದಿ ನಿವಾರಣೆಯಾಗುವುವು ಎಂಬ ನಂಬಿಕೆ. ಅನುಸರಣೆಯ ಪಂಥಕ್ಕೆ ಮೀಸಲಾತಿಯೊಂದು ನೆಪ ಅಷ್ಟೆ. ಅಂಬೇಡ್ಕರ್ ಸಾಹಿತ್ಯವನ್ನು ಅಭ್ಯಾಸ ಮಾಡುವುದು, ಅನುಷ್ಠಾನಗೊಳಿಸುವುದು ಇವರಿಗೆ ಬಹುಮುಖ್ಯ. ಇಲ್ಲದಿದ್ದರೆ ಉಂಟಾಗುವ ಶೂನ್ಯ ಸಂಪಾದನೆಯ ಬಗ್ಗೆ ಇವರಿಗೆ ಅರಿವಿದೆ.

ಬಹಳಷ್ಟು ಜನರು ಮೀಸಲಾತಿಯು ಅಂಬೇಡ್ಕರ್ ಹೋರಾಟದ ಗೆಲುವಿಗೆ ಸಿಕ್ಕ ಫಲ ಎಂದು ತಿಳಿದಿದ್ದಾರೆ. ಅದು ತಪ್ಪು ಕಲ್ಪನೆ. ಮೀಸಲಾತಿಯು ಅಂಬೇಡ್ಕರ್ ಹೋರಾಟದ ಸೋಲಿನ ಫಲವೆಂದೇ ವ್ಯಾಖ್ಯಾನಿಸಬೇಕು. ಯಾಕೆಂದರೆ ಅಂಬೇಡ್ಕರ್ ಬೇಡಿಕೆ ಇಟ್ಟದ್ದು ಪ್ರಾತಿನಿಧ್ಯಕ್ಕೆ; ಮೀಸಲಾತಿಗಾಗಿ ಅಲ್ಲ. ದಲಿತರಿಗೆ ಪ್ರತ್ಯೇಕ ಚುನಾಯಕಗಳ ಬೇಡಿಕೆ ಇಟ್ಟಿದ್ದು ದಲಿತರು ತಮ್ಮ ನಾಯಕನನ್ನು ತಾವೇ ಚುನಾಯಿಸಿಕೊಳ್ಳಲಿ ಎಂಬ ಕಾರಣಕ್ಕಾಗಿ. ಇದರಿಂದ ಹಿಂದೂ ಧರ್ಮಕ್ಕೆ ಹೇಗೆ ನಷ್ಟವಾಗುತ್ತಿತ್ತೋ ದಲಿತರಿಗೆ ಅರ್ಥ ಮಾಡಿಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ. ಗಾಂಧಿ ಯಾವ ರೀತಿ ಅರ್ಥೈಸಿಕೊಂಡರೋ! ಅದರ ವಿರುದ್ಧ ಉಪವಾಸ ಕೂತರು. ಅಂಬೇಡ್ಕರ್ ಸೋಲಲೇ ಬೇಕಾದ ಪ್ರಸಂಗ ಒದಗಿ ಬಂತು. ಗಾಂಧಿಯವರನ್ನು ಉಳಿಸುವುದಕ್ಕಾಗಿ ಸೋತರು. ಒಂದು ವೇಳೆ ಸೋಲಲು ಒಪ್ಪದಿದ್ದರೆ ಭೀಕರ ಪರಿಣಾಮವನ್ನು ಎದುರಿಸಬೇಕಾಗಿತ್ತು. ಬೇರೆ ದಾರಿಯಿಲ್ಲದೇ ಅಂಬೇಡ್ಕರ್ ಸೋತರು ಎನ್ನುವುದಕ್ಕಿಂತ ಬಾಗಿದರು. ಅದರ ಫಲವೇ ಈ ಮೀಸಲಾತಿ. ಅಂಬೇಡ್ಕರ್ ದಲಿತರಿಗೆ ವಿಶೇಷ ಮತದಾನ ಹಕ್ಕನ್ನು ಕಲ್ಪಿಸಿ ಬದುಕಲು ಮೀನು ಹಿಡಿಯುವ ಕೆಲಸವನ್ನು ಕಲಿಸಲು ಯತ್ನಿಸಿದರು. ಆದರೆ ಗಾಂಧೀಜಿಯವರ ಕಾರಣದಿಂದ ಹಿಡಿದ ಮೀನುಗಳನ್ನು ಹಂಚಲು ನಿರ್ಧಾರವಾಯಿತು. ಹೀಗಾಗಿ ಮೀಸಲಾತಿ ಇಂದಿಗೂ ದಲಿತರಿಗೆ ನೀಡುತ್ತಿರುವ ಭಿಕ್ಷೆಯಾಗಿದೆ, ಯಾಚನೆಯಾಗಿದೆ. ಪ್ರಾತಿನಿಧ್ಯ ಎಂಬ ಹಕ್ಕನ್ನು ಕಸಿದುಕೊಂಡು ಮೀಸಲಾತಿಯೆಂಬ ಭಿಕ್ಷೆಯನ್ನು ನೀಡಲಾಗಿದೆ.

ಜಾತಿಪದ್ಧತಿಯ ಮೂಲತತ್ವ ಭೇದ ಮತ್ತು ವಿಘಟನೆ. ಒಂದೇ ಊರಿನಲ್ಲಿ ಒಂದೇ ಸಮಾಜದಲ್ಲಿ ಬದುಕುವವರನ್ನು ಮೇಲು ಕೀಳೆಂದು ವಿಭಜಿಸುವುದು. ಬುದ್ಧ, ಬಸವರ ಹೋರಾಟ ಇದರ ವಿರುದ್ಧವೇ ಆಗಿತ್ತು. ಬಾಬಾಸಾಹೇಬರು ಈ ಹೋರಾಟವನ್ನು ಮುಂದುವರೆಸಿದರು. ಜಾತ್ಯತೀತವಾಗುವುದು ಎಂದರೆ ಸಂಘಟನೆ; ಎಲ್ಲರನ್ನು ಒಗ್ಗೂಡಿಸುವುದು. ಮನುಷ್ಯ ಜಾತಿ ತಾನೊಂದೆ ವಲಂ ಎಂಬ ಮಂತ್ರ ವಾಕ್ಯವನ್ನು ಗಟ್ಟಿಗೊಳಿಸುವುದು.

‘ನೀನು ಏನಾಗಿರುವೆಯೋ ಅದಕ್ಕೆ ನೀನೇ ಜವಾಬ್ದಾರ, ನಿನಗೆ ನೀನೇ ಮಾರ್ಗದರ್ಶಕ’ ಎಂಬ ಬುದ್ಧನ ಮಾತುಗಳನ್ನು ದಲಿತರು, ಶೋಷಿತರು ಅರ್ಥ ಮಾಡಿಕೊಂಡರೆ ಈ ಪ್ರಶ್ನೆಗಳಿಗೆ ಉತ್ತರ ದೊರಕಬಹುದೆಂದು ಕಾಣುತ್ತದೆ.

■ ಮೂಚಿ

## ಮಾತೇ ಮುತ್ತು

★ ಎಷ್ಟು ಪವಿತ್ರ ಗ್ರಂಥಗಳನ್ನು ಓದಿದರೂ, ಎಷ್ಟು ಒಳ್ಳೆಯ ಮಾತುಗಳನ್ನು ಆಡಿದರೂ, ಅದರ ಪ್ರಕಾರ ನೀವು ನಡೆದುಕೊಳ್ಳದಿದ್ದರೆ ಏನು ಪ್ರಯೋಜನ?

-ಗೌತಮ ಬುದ್ಧ

★ ಸಾಲವನ್ನು ಯಾವತ್ತೂ ಆಶಾವಾದಿಯಿಂದಲೇ ಪಡೆಯಿರಿ. ಅವನು ಸಾಲ ವಾಪಸ್ ಪಡೆಯಲು ಒತ್ತಾಯಿಸುವುದಿಲ್ಲ.

-ಆಸ್ಕರ್ ವೈಲ್ಡ್

★ ಎಲ್ಲ ತಪ್ಪುಗಳಿಗೂ ಬಾಗಿಲು ಹಾಕಿಕೊಂಡರೆ, ಸತ್ಯ ಹೊಸಿಲಿನಾಚೆಯೇ ಉಳಿದು ಬಿಡುತ್ತದೆ.

-ರವೀಂದ್ರನಾಥ ಟ್ಯಾಗೋರ್

★ ಹಕ್ಕಿಯೊಂದು ತನಗೆ ಉತ್ತರ ಗೊತ್ತಿದೆಯೆಂದು ಹಾಡುವುದಿಲ್ಲ. ತನಗೆ ಹಾಡು ಗೊತ್ತಿದೆಯೆಂದು ಹಾಡುತ್ತದೆ.

-ಮಾಯಾ ಏಂಜೆಲೊ

★ ಮಗುವನ್ನು ವ್ಯಕ್ತಿಯನ್ನಾಗಿ ಬೆಳೆಸಲು ಆತನ ತಾಯಿ 20 ವರ್ಷ ತೆಗೆದುಕೊಳ್ಳುತ್ತಾಳೆ. ಇಪ್ಪತ್ತೇ ನಿಮಿಷದಲ್ಲಿ ಇನ್ನೊಬ್ಬ ಮಹಿಳೆ ಆತನನ್ನು ಮೂರ್ಖನನ್ನಾಗಿಸುತ್ತಾಳೆ.

-ರಾಬರ್ಟ್ ಫ್ರಾಸ್ಟ್

★ ಏನಾದರಾಗಲಿ, ಮದುವೆಯಾಗಿ. ಒಳ್ಳೆಯ ಹೆಂಡತಿ ಸಿಕ್ಕಿದರೆ ನೀವು ಸುಖವಾಗಿರುತ್ತೀರಿ. ಗಯ್ಯಾಳಿ ಹೆಂಡತಿ ಸಿಕ್ಕಿದರೆ ನೀವು ಒಳ್ಳೆಯ ತತ್ವಜ್ಞಾನಿ ಆಗುತ್ತೀರಿ.

-ಸಾಕ್ರೆಟಿಸ್

★ ನಮ್ಮ ಸುತ್ತಲೂ ಸೌಂದರ್ಯವಿದೆ. ನಾವು ಮಾತ್ರ ಸೌಂದರ್ಯವನ್ನು ಅರಸಿ ಉದ್ಯಾನವನಗಳಲ್ಲಿ ಸುತ್ತಾಡುತ್ತೇವೆ.

-ರೂಮಿ

★ ಬುದ್ಧಿವಂತಿಕೆ ಮತ್ತು ಮೂರ್ಖತನದ ನಡುವಣ ವ್ಯತ್ಯಾಸ ಇಷ್ಟೆ– ಬುದ್ಧಿವಂತಿಕೆ ಅದರದ್ದೇ ಆದ ಮಿತಿ ಇರುತ್ತದೆ.

-ಆಲ್ಬರ್ಟ್ ಐನ್‌ಸ್ಟೀನ್

★ ಹೆಂಡತಿ ಖರ್ಚು ಮಾಡುವುದಕ್ಕಿಂತ ಹೆಚ್ಚು ದುಡಿಯುವವನೇ ಯಶಸ್ವಿ ಗಂಡ. ಅಂತಹ ಗಂಡನನ್ನು ಹುಡುಕಿಕೊಳ್ಳುವವಳೇ ಯಶಸ್ವಿ ಮಹಿಳೆ.

-ಲಾನಾ ಟರ್ನರ್

★ ಸೌಂದರ್ಯ ಮತ್ತು ಸತ್ಯ ಜೀವನದ ಎರಡು ಮುಖ್ಯ ಕೊಡುಗೆಗಳು. ಸೌಂದರ್ಯವನ್ನು ಪ್ರೀತಿಸುವ ಹೃದಯದಲ್ಲಿ ಕಂಡೆ; ಸತ್ಯವನ್ನು ದುಡಿಯುವಾತನ ಕೈಗಳಲ್ಲಿ ಕಂಡೆ.

-ಖಲೀಲ್ ಗಿಬ್ರಾನ್